# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

<u>ಸಿಸಿ ಸಂಖ್ಯೆಃ **427/2017**</u>

ಪಿರ್ಯಾದಿ ಃ ರಮೇಶ ಬಿನ್ ಪುಟ್ಟೇಗೌಡ,
35 ವರ್ಷ,
ಮೂಳೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು.

ವಿರುದ್ಧ

ಆರೋಪಿತರು ಃ ಶ್ರೀಮತಿ ಗಂಗಮ್ಮ ಕೋಂ ಜವರಯ್ಯ,
ಜೈ ಭೀಮ ಬೀದಿ,
1ನೇ ವಾರ್ಡ್, ಬೇಲೂರು ಟೌನ್,
ಬೇಲೂರು.

<u>ಃಃ ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ಆರೋಪಿಃ ಆರೋಪಿತರ ಹೇಳಿಕೆ ಃಃ</u>

ಪ್ರಶ್ನೆಃ 1 ಈ ನ್ಯಾಯಾಲಯದಲ್ಲಿ ಪಿರ್ಯಾದುದಾರರ ಪರ ವಿಚಾರಣೆಯಾಗಿರುವ ಸಾಕ್ಷಿದಾರರು ನೀಡಿರುವ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆಃ2 ಪಿರ್ಯಾದಿ ಪರ ಸಾಕ್ಷಿ-1 ರಮೇಶ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರಾದ ನೀವು ನಿಮ್ಮ ದರದ್ದು ನಿಮಿತ್ತ ಅಂದರೆ ನಿಮ್ಮ ವ್ಯವಹಾರಕ್ಕಾಗಿ ದಿನಾಂಕಃ 31.12.2016 ರಂದು ರೂ.1,80,000/- ಗಳ ಹಣವನ್ನು ಫಿರ್ಯಾದಿಯವರಿಂದ ನಗದಾಗಿ ನೀವು ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ3 ಪಿರ್ಯಾದಿ ಪರ ಸಾಕ್ಷಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮೇಲ್ಕಂಡ ಸಾಲದ ತೀರುವಳಿಗಾಗಿ ಆರೋಪಿಯಾದ ನೀವು ಪಿರ್ಯಾದುದಾರರಿಗೆ ನಿಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಕಳಸಾಪುರ ಶಾಖೆಯ ಚೆಕ್ ನಂಬರ್ 708084 ರಲ್ಲಿ ದಿನಾಂಕ 31.01.2017 ರಂದು ಪಾವತಿಯಾಗುವಂತೆ ಮುಂಗಡ ದಿನಾಂಕವನ್ನು ಹಾಕಿ ರೂ. 1,80,000/- ಗಳಿಗೆ ಚೆಕ್ ನ್ನು ಕೊಟ್ಟಿದ್ದು, ಸದರಿ ಚೆಕ್ ನ್ನು ಪಿರ್ಯಾದುದಾರರು ತಮ್ಮ ಬ್ಯಾಂಕ್ ಆದ ಕೆನರಾ ಬ್ಯಾಂಕ್, ಯಲಹಂಕ ಶಾಖೆಯ ಮೂಲಕ ದಿನಾಂಕಃ 01.04.2017 ರಂದು ನಗದೀಕರಣಕ್ಕಾಗಿ ಹಾಜರುಪಡಿಸಿರುವುದಾಗಿ ಸದರಿ ಚೆಕ್ ನಿಮ್ಮ ಖಾತೆಗೆ ಹೋಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ದಿನಾಂಕಃ 10.04.2017 ರಂದು ಹಿಂಬರಹದೊಂದಿಗೆ ವಾಪಸ್ಸು ಕಳುಹಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ4 ಪಿರ್ಯಾದಿ ಪರ ಸಾಕ್ಷಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ ವಾಪಸ್ಸು ಬಂದ ನಂತರ ಸದರಿ ವಿಷಯವನ್ನು ಪಿರ್ಯಾದುದಾರರು ನಿಮಗೆ ತಿಳಿಸಿರುವುದಾಗಿ ಹೇಳಿರುವುದಲ್ಲದೇ, ಸದರಿ ಹಣವನ್ನು ವಾಪಸ್ಸು ನೀಡುವಂತೆ ಕೇಳಿದಾಗ ಆರೋಪಿಯಾದ ನೀವು ಉಡಾಫೆಯಿಂದ ವರ್ತಿಸಿ ಕಳುಹಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ5 ಪಿರ್ಯಾದಿ ಪರ ಸಾಕ್ಷಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.05.2017 ರಂದು ವಕೀಲರ ಮೂಲಕ ನೊಂದಾಯಿತ ಅಂಚೆಯಲ್ಲಿ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಆರೋಪಿಯಾದ ನಿಮಗೆ ದಿನಾಂಕಃ 16.05.2017 ರಂದು ಜಾರಿಯಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ6 ಪಿರ್ಯಾದಿ ಪರ ಸಾಕ್ಷಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ನೋಟೀಸ್ ಆರೋಪಿಯಾದ ನಿಮಗೆ ದಿನಾಂಕಃ 16.05.2017 ರಂದು ತಲುಪಿದರೂ ಸಹ ಸದರಿ ನೋಟೀಸ್ ಗೆ ಮರು ಉತ್ತರವನ್ನು ನೀಡದೇ ಹಾಗೂ ಸದರಿ ಸಾಲದ

ಹಣವನ್ನು ವಾಪಸ್ಸು ಪಿರ್ಯಾದುದಾರರಿಗೆ ನೀಡದೇ ಸದರಿ ಸಾಲದ ಹಣದ ತೀರುವಳಿಗಾಗಿ ಚೆಕ್ ನೀಡಿದ್ದು, ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ. ಇದರಿಂದ ಸದರಿ ಚೆಕ್ ಮಾನ್ಯ ಮಾಡಲು ನಿಮ್ಮ ಖಾತೆಯಲ್ಲಿ ಹಣ ಇಡದೇ ಪಿರ್ಯಾದುದಾರರಿಗೆ ವಂಚಿಸಿ, ಮೋಸಗೊಳಿಸಿರುವುದಾಗಿ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 7 ನೀವು ಹೇಳುವುದೇನಾದರೂ ಇದೆಯೆ?

ಉತ್ತರಃ

ಪ್ರಶ್ನೆಃ 8 ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯೇ ?

ಉತ್ತರಃ ______

**( ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ. )**

(ಪ್ರಸನ್ನಕುಮಾರ್ ಸಿ.)

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಬೇಲೂರು.**

**ದಿನಾಂಕಃ 01-12-2023**
**ಸ್ಥಳಃ ಬೇಲೂರು.**